ಭೂ ಒತ್ತುವರಿ

4084(3019); ಶ್ರೀ ಅಪ್ಪಚ್ಚುರಂಜನ್ ಎಂ.ಪಿ (ಮಡಿಕೇರಿ)

ಅ) ಕೊಡಗು ಜಿಲ್ಲೆ ಸೋಮವಾರ ಪೇಟೆ ತಾಲ್ಲೂಕು, ಅರಿಶಿನಗುಪ್ಪೆ, ಅಳಲುಗುಪ್ಪೆ ಗ್ರಾಮದಲ್ಲಿ ರಾಜ್ಯ ಹೆದ್ದಾರಿಯ ಮುಖ್ಯ ರಸ್ತೆಯಲ್ಲಿ ಪೈಸಾರಿ ಜಾಗದಲ್ಲಿ ಈ ಹಿಂದೆ ಸರ್ಕಾರದಿಂದ ತೆಗೆದ ಮರವನ್ನು ನೆಟ್ಟಿದ್ದು, ಸದರಿ ಜಾಗವನ್ನು ಇತ್ತೀಚೆಗೆ ಸ್ಥಳೀಯರೋಬ್ಬರು 20 ಎಕರೆಗೂ ಹೆಚ್ಚು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಒತ್ತುವರಿ ಮಾಡಿದ ಭೂಮಿಯನ್ನು ತೆರವುಗೊಳಿಸಲು ಸರ್ಕಾರದ ಕ್ರಮವೇನು;

ಇ) ಈ ಬಗ್ಗೆ ಸಾರ್ವಜನಿಕರು ದೂರು ನೀಡಿದ್ದರೂ ಸಹ ಸಂಬಂಧಿಸಿದ ಇಲಾಖೆಯವರು ನಿರ್ಲಕ್ಷ್ಯ ತಾಳಿದ ಅಧಿಕಾರಿಯವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಅಳಿಲುಗುಪ್ಪೆ ಮತ್ತು ಸಿದ್ದಲಿಂಗಪುರ ಗ್ರಾಮಗಳ ಪಕ್ಕ ರಾಜ್ಯ ಹೆದ್ದಾರಿಯ ಮುಖ್ಯರಸ್ತೆಯಲ್ಲಿ ಪೈಸಾರಿ ಜಾಗವಿದೆ, ಅರಿಶಿನಗುಪ್ಪೆ ಗ್ರಾಮವು ರಸ್ತೆ ಪಕ್ಕದಲ್ಲಿ ಇರುವುದಿಲ್ಲ. ಅಳಿಲುಗುಪ್ಪೆ ಗ್ರಾಮದ ಸ.ನಂ. 2/3ಪಿ2 ರ 40.41 ಎಕರೆ ಪೈಕಿ 12 ಎಕರೆ ಸಿ ಮತ್ತು ಡಿ ವರ್ಗದ ಜಮೀನಾಗಿದ್ದು, ಸದರಿ ಜಮೀನಿನಲ್ಲಿ ಅರಣ್ಯ ಇಲಾಖೆಯವರು ತೇಗದ ಮರ ನೆಟ್ಟಿರುತ್ತಾರೆ. ಈ ಜಮೀನು ಒತ್ತುವರಿಯಾಗಿರುವುದಿಲ್ಲ. ಆದರೆ ಸಿದ್ದಲಿಂಗಪುರ ಗ್ರಾಮದ ಸ.ನಂ. 29/1ರ 0.85 ಸೆಂಟ್ಸ್ 30/1 ರ 3–20 ಎಕರೆ, 31/3ರ 2–10 ಎಕರೆ ಮತ್ತು ಅಳಿಲುಗುಪ್ಪೆ ಗ್ರಾಮದ ಸರ್ವೆ 2/1 ರ 5–10 ಎಕರೆ

ಒಟ್ಟು 11–25 ಎಕರೆ ಸರ್ಕಾರಿ ಜಾಗ ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಒತ್ತುವರಿ ಮಾಡಿದ ಭೂಮಿಯನ್ನು ತೆರವುಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರನ್ವಯ ಕ್ರಮವಹಿಸಲಾಗುತ್ತಿದೆ.

ಇ) ಒತ್ತುವರಿ ಜಮೀನನ್ನು ತೆರವುಗೊಳಿಸಲು ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಬಗ್ಗೆ ಕಂದಾಯ ಇಲಾಖೆಯ ಅಧಿಕಾರಿಗಳು ನಿರ್ಲಕ್ಷ್ಯ ತೋರಿರುವುದಿಲ್ಲ.

ಅರಣ್ಯ ಪ್ರದೇಶ

4085(4809); ಶ್ರೀ ಅಶೋಕ್ ಖೇಣಿ (ಬೀದರ್ ದಕ್ಷಿಣ)

ಅ) ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಪ್ರದೇಶವು ಅರಣ್ಯ ಪ್ರದೇಶಕ್ಕೆ ಸೇರಿರುತ್ತದೆ;

ಆ) ಈ ಅರಣ್ಯ ಪ್ರದೇಶದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಈ ಅರಣ್ಯ ಪ್ರದೇಶದಲ್ಲಿ ಕಳೆದ 2 ವರ್ಷದಿಂದ ಸರ್ಕಾರವು ಯಾವ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ;

ಈ) ಯೋಜನೆಗಳಿಗಾಗಿ 2 ವರ್ಷದಲ್ಲಿ ಬಿಡುಗಡೆಗೊಳಿಸಿದ ಅನುದಾನವೆಷ್ಟು;

ಉ) ಈ ಅರಣ್ಯ ಪ್ರದೇಶವನ್ನು ಪ್ರವಾಸಿ ತಾಣ ಮಾಡಲು ಯೋಜನೆಯನ್ನು ರೂಪಿಸಿದೆಯೇ?

ಶ್ರೀ ಬಿ. ರಮಾನಾಥ್ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮೀಸಲು ಅರಣ್ಯ, ರಕ್ಷಿತ ಅರಣ್ಯ, ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ–4ರಡಿ ಅಧಿಸೂಚನೆಯಾಗಿರುವ ಅರಣ್ಯ ಹಾಗೂ ವರ್ಗೀಕರಿಸದ ಅರಣ್ಯ ಒಳಗೊಂಡಂತೆ ಒಟ್ಟು 15,964.10 ಹೆಕ್ಟೇರ್ ಅರಣ್ಯ ಪ್ರದೇಶವಿರುತ್ತದೆ.